# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1347 |
| ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ<br>(ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | : | 30.12.2022 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕೃಷಿ ರೈತರಿಗೆ ಖಾಸಗಿ ಕಂಪನಿಗಳು ಕಳಪೆ ಬೀಜ ಸರಬರಾಜು ಮಾಡಿ ನಷ್ಟ ಉಂಟು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಪ್ರಸಕ್ತ ಸಾಲಿನಲ್ಲಿ ರಾಜ್ಯದ ಕೃಷಿ ರೈತರಿಗೆ ಖಾಸಗಿ ಕಂಪನಿಗಳು ಕಳಪೆ ಬೀಜ ಸರಬರಾಜು ಮಾಡಿ ನಷ್ಟ ಉಂಟಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಖಾಸಗಿ ಕಂಪನಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ; | ರೈತರಿಗೆ ಖಾಸಗಿ ಕಂಪನಿಗಳು/ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಕಳಪೆ ಬೀಜ ಸರಬರಾಜು ಮಾಡಿ ನಷ್ಟ ಉಂಟಾದಲ್ಲಿ, ರಾಜ್ಯದಲ್ಲಿ ಕೇಂದ್ರ ಸರ್ಕಾರ ರೂಪಿಸಿರುವ ಬೀಜ ಕಾಯ್ದೆಗಳು(ಬೀಜ ಕಾಯ್ದೆ-1966, ಬೀಜ ನಿಯಮ-1968, ಬೀಜ ನಿಯಂತ್ರಣ ಆದೇಶ, 1983) ಜಾರಿಯಲ್ಲಿದ್ದು, ಸದರಿ ಕಾಯಿದೆಗಳನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ. ರೈತರಿಗೆ ಗುಣಮಟ್ಟದ ಬೀಜ ವಿತರಿಸಲು ಬೀಜ ಪರಿವೀಕ್ಷಕರುಗಳು ಅಧಿಸೂಚಿತವಾಗಿದ್ದು, ಮಾರಾಟ ಮಳಿಗೆಗಳಿಂದ ಬೀಜ ಮಾದರಿಗಳನ್ನು ಸಂಗ್ರಹಿಸಿ ಬೀಜ ಪರೀಕ್ಷಾ ಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗೆ ಒಳಪಡಿಸುತ್ತಾರೆ. ಬೀಜ ಮಾದರಿಯು ಕಡಿಮೆ ಗುಣಮಟ್ಟದ್ದೆಂದು ತಿಳಿದು ಬಂದಲ್ಲಿ ಅಂತಹ ಮಾರಾಟಗಾರರು ಮತ್ತು ಬೀಜೋತ್ಪಾದಕರ ಮೇಲೆ ಸದರಿ ಕಾಯಿದೆಗಳಡಿ ಕ್ರಮ ಜರುಗಿಸಲಾಗುತ್ತಿದೆ. ಮುಂದುವರೆದು, ಪರವಾನಗಿ |

| | | |
|---|---|---|
| | | ಇಲ್ಲದೆ ರೈತರಿಗೆ ಕಳಪೆ ಗುಣಮಟ್ಟದ ಬೀಜ ವಿತರಿಸುವ ಮಾರಾಟಗಾರರ ವಿರುದ್ಧ ಸದರಿ ಕಾಯಿದೆಗಳಡಿ ಕ್ರಮ ಕೈಗೊಳ್ಳಲಾಗುತ್ತಿದೆ. ಆದಾಗ್ಯೂ, ರಾಜ್ಯದಲ್ಲಿ ಗುಣಮಟ್ಟದ ಬೀಜ ಸರಬರಾಜು ಮಾಡುವುದನ್ನು ಖಾತ್ರಿ ಪಡಿಸಲು ಜಾರಿದಳ ಘಟಕ ಸಹ ವಿಭಾಗೀಯ ಮಟ್ಟದಲ್ಲಿ ಅಸ್ತಿತ್ವದಲ್ಲಿದೆ. |
| ಇ) | ಕೃಷಿಯಿಂದ ನಷ್ಟ ಅನುಭವಿಸಿದ ರೈತರುಗಳಿಗೆ ಸರ್ಕಾರ ಪರಿಹಾರ ಒದಗಿಸಲು ಯಾವ ಕ್ರಮ ಕೈಗೊಂಡಿದೆ; | ಪ್ರಸ್ತುತ ಖಾಸಗಿ ಕಂಪನಿಗಳು/ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಸರಬರಾಜಾದ ಬಿತ್ತನೆ ಬೀಜಗಳಿಂದ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ನೀಡುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಆದರೆ, ಕಡಿಮೆ ಗುಣಮಟ್ಟದ ಬಿತ್ತನೆ ಬೀಜಗಳಿಂದ ಬೆಳೆ ನಷ್ಟವಾದಲ್ಲಿ ರೈತರು ಗ್ರಾಹಕರ ವೇದಿಕೆಯ ಮೂಲಕ ಪರಿಹಾರ ಪಡೆದುಕೊಳ್ಳಬಹುದಾಗಿರುತ್ತದೆ. |

ಸಂಖ್ಯೆ : AGRI –ACT/291/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು